ಇದೆ. ಗುಡೂರಿನಲ್ಲಿ 18 ಸಾವಿರ ಜನಸಂಖ್ಯೆ ಇದ್ದು, ರೈತರು ಅಲ್ಲಿ ಜಾಸ್ತಿ ಇದ್ದಾರೆ. ಮೂರು ಆಯಿಲ್ ಮಿಲ್‌ಗಳು ಇವೆ. ಅತಿ ಅವಶ್ಯವಾಗಿ ಅಲ್ಲಿ ಒಂದು ಉಪ ಮಾರುಕಟ್ಟೆ ತೆಗೆಯಬೇಕು. ಆದರೆ, ಆ ಪ್ರಸ್ತಾವನೆ ಸರ್ಕಾರದ ಮುಂದಿಲ್ಲ ಎಂದರೆ ಹೇಗೆ? ಇಲ್ಲದಿದ್ದರೆ ರೈತರು ಚೀಲಗಳನ್ನು ತಂದು ಬಂಡಿಯೊಳಗೆ ಹಾಗೆಯೇ ಖರೀದಿ ಮಾಡಿ ಕೊಟ್ಟುಬಿಡುತ್ತಾರೆ. ಮತ್ತೆ ಅದು ದೊಡ್ಡ ಮಾರುಕಟ್ಟೆ. ಇಳಕಲ್ ಮತ್ತು ಹುನಗುಂದಕ್ಕಿಂತ ಹೆಚ್ಚಿನ ಒಕ್ಕಲುತನ ಉತ್ಪನ್ನ ಸ್ವಲ್ಪ ಜಾಸ್ತಿ ಇದೆ. ಅದರ ಸಲುವಾಗಿ ಒಂದು ಉಪಮಾರುಕಟ್ಟೆ ಅಲ್ಲಿ ತೆರೆಯುವ ಸಲುವಾಗಿ ತಾವು ಆಶ್ವಾಸನೆ ಕೊಡಬೇಕೆಂದು ಕೊರುತ್ತಿದ್ದೇನೆ.

ಶ್ರೀ ಮದನಗೋಪಾಲ್ ನಾಯಕ : ತಮ್ಮ ಅನಿಸಿಕೆ ಬಹಳ ಸೂಕ್ತವಾದದ್ದು. ರೈತರಿಗೆ ಸಹಾಯ ಮಾಡುವುದೇ ನಮ್ಮ ಮಾರ್ಕೆಟ್ ಕಮಿಟಿಯ ಉದ್ದೇಶ. ತಾವು ಹೇಳಿದಂತೆ ಗುಡೂರಿನಲ್ಲಿ ಒಂದು ಉಪಮಾರುಕಟ್ಟೆ ಸ್ಥಾಪನೆ ಮಾಡಿದರೆ ರೈತರಿಗೆ ಅನುಕೂಲವಾಗುತ್ತದೆ. ಸುತ್ತಮುತ್ತಲಿಂದ ಬರುವ ಮಾಲ್‌ನ ವಿವರ ತರಿಸಿಕೊಂಡು ಉಪ ಮಾರುಕಟ್ಟೆ ಮಾಡುವ ವಿಚಾರ ಪರಿಶೀಲಿಸಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀ ಎಂ. ವೈ. ಮೇಟಿ : ತಾವು ಒಪ್ಪಿಗೆ ಕೊಟ್ಟು ಬಿಡಿ ಸ್ವಾಮಿ, ಅಲ್ಲಿ ರೈತರಿಗೆ ಹೇಳ ತೀರದ ಅನ್ಯಾಯವಾಗುತ್ತಿದೆ. ಅದನ್ನು ಕಣ್ಣಿಂದ ನೋಡಿದರೆ ಗೊತ್ತಾಗುತ್ತದೆ.

ಶ್ರೀ ಮದನಗೋಪಾಲ್ ನಾಯಕ : ಮಾರುಕಟ್ಟೆ ಪ್ರಾರಂಭ ಮಾಡಿದ ಮೇಲೆ ಬರೀ ಸ್ಟ್ಯಾಫಿಗೆ ಸಂಬಳ ಕೊಡುವುದು ಸರಿಯಲ್ಲ. ರೈತರಿಗೆ ಅನುಕೂಲವಾಗುವಂತೆ ದೃಷ್ಟಿಯಿಟ್ಟುಕೊಂಡು ನಾವು ಮಾಡಬೇಕಾಗುತ್ತದೆ. ಅದಕ್ಕಾಗಿ ವಿವರ ತರಿಸಿ, ಒಂದು ವೇಳೆ ಅಲ್ಲಿ ಮಾರುಕಟ್ಟೆ ಸ್ಥಾಪನೆ ಮಾಡುವ ಅವಶ್ಯಕತೆ ಇದ್ದರೆ ಜರೂರಾಗಿ ಕ್ರಮ ತೆಗೆದುಕೊಳ್ಳುತ್ತೇನೆ.

ವಿಷಯ : ಕಂದಾಯ ಇಲಾಖೆಯಲ್ಲಿ ದಾಖಲಾತಿಗಳನ್ನು ಪಡೆದುಕೊಳ್ಳಲು ರೈತರಿಗೆ ತೊಂದರೆ.

1383

ಶ್ರೀ ಎ. ಟಿ. ರಾಮಸ್ವಾಮಿ (ಅರಕಲಗೂಡು) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಂದಾಯ ಇಲಾಖೆಯಲ್ಲಿ ದಾಖಲಾತಿಗಳನ್ನು ಪಡೆದುಕೊಳ್ಳಲು ರೈತರಿಗೆ ತೊಂದರೆಯಾಗುತ್ತಿರುವುದು ಮತ್ತು ಪಹಣಿ ಪಾಗೂ ಇತರೆ ದಾಖಲೆಗಳಲ್ಲಿ ತಿದ್ದುಪಡಿಗಳನ್ನು ಅಕ್ರಮವಾಗಿ ಮಾಡಿ ರೈತರಿಗೆ ಕಿರುಕುಳವಾಗುತ್ತಿರುವುದು ಸರ್ಕಾರಕ್ಕೆ ತಿಳಿದಿದೆಯೇ?

ಆ) ತಿಳಿದಿದ್ದರೆ, ಸರ್ಕಾರ ಅದನ್ನು ಸರಿಪಡಿಸಲು ಕೈಗೊಂಡಿರುವ ಕ್ರಮಗಳೇನು?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ಸರ್ಕಾರಕ್ಕೆ ವಿಷಯ ತಿಳಿದಿದೆ.

ಆ) ರೈತರು ಯಾವುದೇ ದಾಖಲಾತಿಗಳನ್ನು ಕೋರಿ ಮನವಿ ಸಲ್ಲಿಸಿದ್ದಲ್ಲಿ ಅದನ್ನು ಸಕಾಲದಲ್ಲಿ ಕೊಡಲು ಆಗಿಂದಾಗ್ಗೆ ಸರ್ಕಾರದಿಂದ ನಿರ್ದೇಶನ ನೀಡಲಾಗುತ್ತಿದೆ. ಹೋಬಳಿ ಕೇಂದ್ರಸ್ಥಾನ ಗ್ರಾಮಗಳಲ್ಲಿರುವ ನಾಡ ಕಛೇರಿಗಳಲ್ಲಿಯೂ ದಾಖಲೆಗಳನ್ನು ವಿತರಿಸಲು ವ್ಯವಸ್ಥೆ ಮಾಡಲಾಗಿದೆ. ದಾಖಲೆಗಳನ್ನು ಕೊಡಲು ವಿಳಂಬವಾದಲ್ಲಿ

ಮತ್ತು ಅಕ್ರಮವಾಗಿ ತಿದ್ದುಪಡಿ ಮಾಡಿ ರೈತರಿಗೆ ಕಿರುಕುಳ ನೀಡುತ್ತಿರುವ ಪ್ರಕರಣಗಳು ವರದಿಯಾದಲ್ಲಿ ಕೂಡಲೇ ಅಂತಹವರ ಮೇಲೆ ಸಿ.ಸಿ.ಎ. ನಿಯಮಗಳ ಪ್ರಕಾರ ಶಿಸ್ತಿನ ಕ್ರಮ ಜರುಗಿಸಲು ಅವಕಾಶವಿರುತ್ತದೆ.

ಶ್ರೀ ಎ. ಟಿ. ರಾಮಸ್ವಾಮಿ : ಅಧ್ಯಕ್ಷರೇ, ಕಂದಾಯ ಇಲಾಖೆಯಲ್ಲಿ ದಾಖಲಾತಿಗಳನ್ನು ಪಡೆದುಕೊಳ್ಳುವಲ್ಲಿ ರೈತರಿಗೆ ತೊಂದರೆ ಆಗುತ್ತಿರುವ ವಿಚಾರ ಸರ್ಕಾರಕ್ಕೆ ತಿಳಿದಿದೆ ಎಂದು ಉತ್ತರದಲ್ಲಿ ತಿಳಿಸಲಾಗಿದೆ. ಆದುದರಿಂದ ಈಗಿರುವ ವ್ಯವಸ್ಥೆಯಲ್ಲಿ ಸಕಾಲದಲ್ಲಿ ದಾಖಲೆಗಳು ಸಿಗುತ್ತಿಲ್ಲ ಎಂಬುದನ್ನು ಕೂಡ ಸರ್ಕಾರ ಹೇಳಿದೆ. ಆದ್ದರಿಂದ ಸುಲಭವಾಗಿ ದಾಖಲಾತಿ ಸಿಗುವಂತೆ ಮಾಡಲು ಸರ್ಕಾರ ಏನಾದರೂ ಕಟ್ಟುನಿಟ್ಟಿನ ಸರಳ ವಿಧಾನವನ್ನು ಕೈಗೊಂಡು ಆಗುತ್ತಿರುವ ಕಿರುಕುಳ ತಪ್ಪಿಸಲು ಕ್ರಮ ತೆಗೆದುಕೊಳ್ಳುತ್ತೀರೋ. ಇದನ್ನು ಸರಿಪಡಿಸಲಿಕ್ಕೆ ಸರ್ಕಾರ ಹೆಚ್ಚು ಹಣವೇನೂ ತೊಡಗಿಸಬೇಕಾಗಿಲ್ಲ. ಇರತಕ್ಕಂಥ ವಿಧಾನವನ್ನು ಸರಳಗೊಳಿಸಿದರೆ ಸಾಕು., ರೈತರಿಗೆ ಬಹಳ ಅನುಕೂಲವಾಗುತ್ತದೆ. ಇದು ಒಂದನೆಯದು. ಎರಡನೆಯದು ಪಹಣಿ ಹಾಗೂ ಇತರೆ ದಾಖಲಾತಿಗಳ ತಿದ್ದುಪಡಿಗಳನ್ನು ಅಕ್ರಮವಾಗಿ ಮಾಡುತ್ತಿರತಕ್ಕಂಥದ್ದು ಸರ್ಕಾರದ ಗಮನಕ್ಕೆ ಬಂದಿದೆ ಎಂದು ತಾವೇ ಹೇಳಿದ್ದೀರಿ. ಪಹಣಿ ಮತ್ತು ಇತರೆ ದಾಖಲಾತಿಗಳನ್ನು ತಿದ್ದುಪಡಿ ಮಾಡುತ್ತಾರೆ. ಇದರಿಂದ ರೈತರಿಗೆ ಬಹಳ ತೊಂದರೆಯಾಗುತ್ತದೆ. ಈಗ ಪಹಣಿಯಲ್ಲಿ ಕಾಲಂ ನಂಬರ್ 9 ಇರುತ್ತದೆ. ಅದರಲ್ಲಿ ತಿದ್ದುಪಡಿಯನ್ನು ಮಾಡುತ್ತಿದ್ದಾರೆ. ಯಾರೋ ಹೆಸರಿನ ಬದಲಿಗೆ ಯಾರೋ ಹೆಸರನ್ನು ಬರೆದು ಹಕ್ಕುದಾರರನ್ನೇ ಬೇರೆಯವರು ಮಾಡುತ್ತಿದ್ದಾರೆ. ಅದನ್ನು ತಪ್ಪಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೀರಾ? ಮತ್ತು ಸತ್ತಿರುವವರಿಗೆಲ್ಲ ಪವತಿ ಖಾತೆಗಳನ್ನು ಮಾಡುತ್ತಿದ್ದಾರೆ. ಇದರಿಂದ ಯಾರದೋ ಹಕ್ಕು ಯಾರಿಗೋ ಆಗುತ್ತದೆ. ಅವರು ಕೋರ್ಟುಖಟ್ಲೆ ಹತ್ತಬೇಕಾಗುತ್ತದೆ. ಇದನ್ನು ತಪ್ಪಿಸುವುದಕ್ಕೆ ತಾವು ಕ್ರಮ ತೆಗೆದುಕೊಳ್ಳುತ್ತೀರಾ? ಈಗ ದಾಖಲೆಗಳನ್ನೇ ಸೃಷ್ಟಿಸಿ ತಿದ್ದುಪಡಿ ಮಾಡುವ ರೆವಿನ್ಯೂ ಅಧಿಕಾರಿಗಳಿದ್ದಾರೆ. ಅಂಥವರ ಮೇಲೆ ಸಿಸಿಎ ರೂಲ್ಸ್ ಪ್ರಕಾರ ಈ ವರ್ಷದಲ್ಲಿ ಏನು ಕ್ರಮ ಕೈಗೊಂಡಿದ್ದೀರಿ ಎನ್ನುವುದನ್ನು ತಾವು ದಯವಿಟ್ಟು ತಿಳಿಸಬೇಕು.

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಅವರು ಎರಡು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದಾರೆ. ಒಂದು ರೆವಿನ್ಯೂ ದಾಖಲಾತಿಗಳನ್ನು ಅತೀ ಶೀಘ್ರವಾಗಿ ರೈತರಿಗೆ ದೊರೆಯುವಂತೆ ಮಾಡಬೇಕು. ಅದು ಆಗುತ್ತಿಲ್ಲ. ಇದು ಒಂದನೆಯದು. ಎರಡನೆಯದು ದಾಖಲಾತಿಗಳನ್ನೇ ಈ ರೆವಿನ್ಯೂ ಅಧಿಕಾರಿಗಳು ಕೆಲವರು ತಿದ್ದುತ್ತಾರೆ. ಅದರಿಂದ ರೈತರಿಗೆ ತುಂಬಾ ತೊಂದರೆಯಾಗಿದೆ. ಇದನ್ನು ತಪ್ಪಿಸುವುದಕ್ಕೆ ಏನು ಕ್ರಮ ಕೈಗೊಳ್ಳಬೇಕು ಎಂದು ಹೇಳಿದ್ದಾರೆ. ಸರ್ಕಾರದವರು ಆಗಾಗ್ಗೆ ಸುತ್ತೋಲೆಯನ್ನು ಕಳುಹಿಸಿದ್ದಾರೆ. ಅದಷ್ಟು ಜಾಗ್ರತೆ ದಾಖಲಾತಿಗಳನ್ನು ರೈತರಿಗೆ ಕೊಡಬೇಕೆಂದೂ ಮತ್ತು ಎಲ್ಲಿ ಅದನ್ನು ತಿದ್ದಿದ್ದಾರೆ, ಅವರ ಮೇಲೆ ಕ್ರಮ ಕೈಗೊಳ್ಳಬೇಕು ಎಂದು. ನಾನು ಕೂಡ ಅನೇಕ ಕಡೆ ಜಿಲ್ಲಾಧಿಕಾರಿಗಳ ಕಛೇರಿಯೊಳಗೆ ಸಭೆ ಸೇರಿಸಿದಾಗ ರೆವಿನ್ಯೂ ಅಧಿಕಾರಿಗಳಿಗೆ ಸೂಚನೆಕೊಟ್ಟಿದ್ದೇನೆ. ಇಲ್ಲಿ ಕಂಪ್ಲೇಂಟ್ ಬಂದಿದೆ, ತಿದ್ದುಪಡಿ ಮಾಡಿದ್ದಾರೆ ಮತ್ತು ನಿಧಾನ ಮಾಡಿದ್ದಾರೆ ಎಂದು ಕಂಪ್ಲೇಂಟ್ ಬಂದಾಗ, ಅದರ ಬಗ್ಗೆ ಎನ್‌ಕ್ವೈರಿ ಮಾಡಿ ಆ ಅಧಿಕಾರಿಗಳನ್ನು ಸಸ್ಪೆನ್‌ಷನ್‌ನಲ್ಲಿ ಇಡಬೇಕು ಎಂದು ಮಾಡಿದ್ದೇನೆ, ಕೆಲವು ಕಡೆ ಅದು ಆಗಿದೆ.

ಶ್ರೀ ಎ. ಟಿ. ರಾಮಸ್ವಾಮಿ : ಮಾನ್ಯ ಅಧ್ಯಕ್ಷರೇ, ಈ ಭೂ ದಾಖಲೆಗಳು ಇಲಾಖೆಯ ಸಬ್-ಡಿವಿಜನ್ ಆಫೀಸ್‌ನಲ್ಲಿ ಇರುತ್ತದೆ. ಲ್ಯಾಂಡ್ ರಿಕಾರ್ಡ್ ಆಫೀಸ್‌ನಲ್ಲಿ ಒಂದೊಂದು ಸಬ್-ಡಿವಿಜನ್ ಇರುತ್ತದೆ. ರೈತರಿಗೆ ಅದರಿಂದ ಸಬ್-ಡಿವಿಜನ್‌ಗೆ ಹೋಗಿ ದಾಖಲೆಗಳನ್ನು

ಪಡೆದುಕೊಳ್ಳುವುದು ಬಹಳ ತೊಂದರೆಯಾಗುತ್ತದೆ. ಅದನ್ನು ತಾಲ್ಲೂಕು ಮಟ್ಟಕ್ಕೆ ತಂದು ಭೂ ದಾಖಲೆಗಳು ರೈತರಿಗೆ ಸುಲಲಿತವಾಗಿ ಸಿಗುವುದಕ್ಕೆ ವ್ಯವಸ್ಥೆ ಮಾಡುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ : ಕೆಲವು ಕಡೆ ನಾಡ ಕಛೇರಿಗಳು ಎಂದು ಇದೆ. ಹಾಸನ ಜಿಲ್ಲೆಯೊಳಗೆ ವಾರಕ್ಕೆ ಒಂದು ದಿವಸ ನಾಡ ಕಛೇರಿಗೆ ಹೋಗಬೇಕು. ಹೋಬಳಿ ಹೆಡ್ ಕ್ವಾರ್ಟರ್ಸ್‌ಗೆ ಹೋಗಬೇಕು. ರೈತರು ಕೇಳಿದಾಗ ದಾಖಲಾತಿಗಳನ್ನು ಅವರು ಒದಗಿಸಿ ಕೊಡಬೇಕು. ಆ ಒಂದು ಏರ್ಪಾಡನ್ನು ಮಾಡಿದ್ದೇವೆ.

ಶ್ರೀ ಎ. ಟಿ. ರಾಮಸ್ವಾಮಿ : ನಾನು ಕೇಳಿದ್ದುದು ಲ್ಯಾಂಡ್ ರಿಕಾರ್ಡ್ಸ್ ಸರ್ವೆಗೆ ಸಂಬಂಧಪಟ್ಟಂತೆ ಲ್ಯಾಂಡ್ ರಿಕಾರ್ಡ್ಸ್‌ಗಳು ಸಬ್-ಡಿವಿಜನ್ ಆಫೀಸ್‌ನಲ್ಲಿ ಮಾತ್ರ ಸಿಗುವುದು. ಅದನ್ನು ತಾವು ತಾಲ್ಲೂಕು ಮಟ್ಟಕ್ಕೆ ತರುತ್ತೀರಾ? ರೈತರು ಬಹಳ ದೂರ ಅಲೆಯುವುದನ್ನು ತಪ್ಪಿಸುತ್ತೀರಾ?

ಶ್ರೀ ಎಂ. ರಾಜಶೇಖರಮೂರ್ತಿ : ಅದು ಹೊಸ ಸಲಹೆ ಬಂದಿದೆ. ಅದನ್ನು ಆಲೋಚನೆ ಮಾಡುತ್ತೇನೆ.

<u>ವಿಷಯ : ಚಾಮರಾಜನಗರ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿರುವ ವೃದ್ಧಾಪ್ಯ ವೇತನದಾರರು.</u>

1401

ಶ್ರೀ ಕೆ. ಸಿದ್ದಯ್ಯ (ಸಂತೇಮಾರನಹಳ್ಳಿ) : ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ?

ಅ) ಅನಧಿಕೃತವಾಗಿ ವೃದ್ಧಾಪ್ಯ ವೇತನ ಪಡೆಯುತ್ತಿರುವವರನ್ನು ಪತ್ತೇ ಹಚ್ಚಲು ಪ್ರತಿಯೊಂದು ಹಳ್ಳಿಗಳಲ್ಲೂ ವೃದ್ಧಾಪ್ಯ ವೇತನವನ್ನು ಪಡೆಯುತ್ತಿರುವವರ ಪಟ್ಟಿಯನ್ನು ತಯಾರಿಸಿ ಅದನ್ನು ಸಂಬಂಧಪಟ್ಟ ಮಂಡಲ ಪಂಚಾಯಿತಿಗಳಲ್ಲಿ ಸಾರ್ವಜನಿಕರ ಮಾಹಿತಿಗಾಗಿ ಇಡಲು ಚಾಮರಾಜನಗರ ಮತ್ತು ನಂಜನಗೂಡು ತಹಶೀಲ್ದಾರರಿಗೆ ಸರ್ಕಾರವು ಸೂಚನೆಗಳನ್ನು ನೀಡುವುದೇ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು) :

ಅ) ಇಲ್ಲ.

ಶ್ರೀ ಕೆ. ಸಿದ್ದಯ್ಯ : ಮಾನ್ಯ ಅಧ್ಯಕ್ಷರೇ, ಇದರಲ್ಲಿ ಈ ವೃದ್ಧಾಪ್ಯ ವೇತನದವರು ಅನೇಕ ತಪ್ಪು ಮಾಹಿತಿಗಳನ್ನು ಕೊಟ್ಟು ಕಳ್ಳತನದಲ್ಲಿ ಸರ್ಕಾರಕ್ಕೆ ಮೋಸ ಮಾಡಿ ಹೊಡೆಯುತ್ತಿದ್ದಾರೆ. ಇದನ್ನು ಪತ್ತೆ ಹಚ್ಚುವುದಕ್ಕೆ ನೀವು ಆಯಾ ಮಂಡಲಗಳಿಗೆ ಕಳುಹಿಸಬೇಕು ಎಂದು ಹೇಳಿದರೆ ಕಳುಹಿಸುವುದಕ್ಕಾಗುವುದಿಲ್ಲ ಎಂದು ಹೇಳಿದ್ದೀರಿ. ಇದಕ್ಕೆ ಕಾರಣವನ್ನು ತಿಳಿಸುತ್ತೀರಾ ಸ್ವಾಮಿ.

ಶ್ರೀ ಎಂ. ರಾಜಶೇಖರಮೂರ್ತಿ(ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೇ, ಮಂಡಲಗಳಿಗೆ ಕಳುಹಿಸಿ ಅದನ್ನು ಭಾವಡಿಯೊಳಗೂ ಎಲ್ಲೋ ಪಬ್ಲಿಷ್ ಮಾಡಿದರೆ ಅದರ ಬಗ್ಗೆ ಕೆಲವರು ಅಬ್ಜೆಕ್ಷನ್ಸ್ ಆ ಊರಿನಲ್ಲಿ ಹಾಕಬಹುದು. ಅಂದರೆ ಗ್ರಾಮಗಳಲ್ಲಿ ಪಾರ್ಟಿಯಾಗಿ